**ದಿನಾಂಕ 24.04.2023 ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | ರಾಘವೇಂದ್ರ |
| **ತಂದೆಯ ಹೆಸರು** | ಈಶ್ವರ ರಾವ್ |
| **ವಯಸ್ಸು** | 42 |
| **ಉದ್ಯೋಗ** | ಖಾಸಗಿ ನೌಕರಿ |
| **ವಾಸಸ್ಥಳ** | ನಂ.272, 2 ನೇ ಮಹಡಿ, 67 ನೇ ಅಡ್ಡ, 5 ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು -10 |

**ಮುಖ್ಯ ವಿಚಾರಣೆಃ ಶ್ರೀ. ಆರೋಪಿ ಪರ ವಕೀಲರಿಂದಃ-**

ದೂರುದಾರರಾದ ನಾಗೇಶ ರಾವ್ ಇವರು ನನ್ನ ತಾಯಿಯ ಸ್ವಂತ ತಮ್ಮ. 2004-05 ರಿಂದ ನಾನು ದೂರುದಾರರು ಮತ್ತು ಅವರ ಹೆಂಡತಿ ಉಪಜೀವನಕ್ಕೆ ಪ್ರತಿ ತಿಂಗಳು ಹಣ ಕೊಡುತ್ತಿದ್ದೆ. ನಮ್ಮ ಮಾವನಾದ ದೂರುದಾರರು ಮತ್ತು ಅವರ ಹೆಂಡತಿಗೆ ಉಪಜೀವನಕ್ಕಾಗಿ ಯಾವುದೇ ಆದಾಯದ ಮೂಲಗಳು ಇಲ್ಲ. ದೂರುದಾರರು ನನಗೆ ನೀಡಿರುವ ನೋಟೀಸಿಗೆ ನಾನು ಅದಕ್ಕೆ ಪ್ರತ್ಯುತ್ತರ ನೀಡಿದ್ದೇನೆ. ನನ್ನ ಪ್ರತ್ಯುತ್ತರ ನೀಡಿರುವಂತೆ ನಾನು ದೂರುದಾರರಿಂದ ಈ ಕೇಸಿನ ವಿವಾದಿತ ಹಣವನ್ನು ಪಡೆದುಕೊಂಡಿಲ್ಲ ಮತ್ತು ಆ ಹಣದ ತಿರುವಳಿಗಾಗಿ ವಿವಾದಿತ ನಿ.ಪಿ.1 ರ ಚೆಕ್ಕನ್ನು ಅವರಿಗೆ ನೀಡಿಲ್ಲ. ದೂರುದಾರರು ತಮ ಹೆಂಡತಿಯಾದ ರಾಧಾಬಾಯಿ ಇವರ ಹೆಸರಿನ ಮೇಲೆ ರೂ.30 ಲಕ್ಷ ಗೃಹ ಸಾಲ ಪಡೆದುಕೊಂಡಿರುತ್ತಾರೆ ಅದರ ಮರುಪಾವತಿಗಾಗಿ ನಾನು ಜಾಮೀನುದಾರನಾಗಿ ನಿಂತಿರುತ್ತೇನೆ. ಅವರು ಪಡೆದಿರುವ ಗೃಹ ಸಾಲದ ತಿಂಗಳ ಕಂತಿನ ಹಣವನ್ನು ನಾನೇ ಪಾವತಿ ಮಾಡುತ್ತಿದ್ದೆ. ತದನಂತರ ಜುಲೈ ತಿಂಗಳ 2019 ರಲ್ಲಿ ನಾನು ನನ್ನ

This is a True Copy of the Court Records Online. Authenticated @ districts.ecourtsindia.com/cnr/KABC030158842021/truecopy/order-4.pdf

ಕೆಲಸ ಕಳೆದುಕೊಂಡ ಪ್ರಯುಕ್ತ ಆ ಸಾಲದ ಕಂತಿನ ಹಣ ನನಗೆ ಕಟ್ಟಲು ಆಗಲಿಲ್ಲ. ಗೃಹ ಸಾಲ ಪಡೆದ **5-6** ತಿಂಗಳ ನಂತರ ದೂರುದಾರರ ಹೆಂಡತಿ ಇವರು ಅದೇ ಮನೆಯ ನೆಲ ಮಹಡಿಯ ಕಟ್ಟಡವನ್ನು ಖರೀದಿಮಾಡಿದ್ದಾರೆ. ನಿ.ಪಿ.17 ರ ದಾಖಲೆಯನ್ನು ನಾನು ಬರೆದುಕೊಟ್ಟಿಲ್ಲ.

**ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

(ಓದಿ ಹೇ.ಕೇ.ಸ.ಇ.)

(ಭೋಲಾ ಪಂಡಿತ)

20ನೇ ಅ.ಮು.ಮ.ದಂ.

ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC030158842021/truecopy/order-4.pdf

www.ecourtsindia.com